ಮೂ. ದಾ. ನಂ. 133/2022

ಪಿ.ಡಬ್ಲ್ಯು.1

(ಇಂದು ದಿನಾಂಕ 09-11-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಮುಖ್ಯ ವಿಚಾರಣೆ – ವಾದಿ ಪರ ಶ್ರೀ ರಂಜನ್ ಜಿ. ನಾಯಕ ವಕೀಲರಿಂದ–**

ನಾನು ಈ ಪ್ರಕರಣದಲ್ಲಿ 1 ನೇ ವಾದಿಯ ಮೊಕ್ತ್ಯಾರುದಾರನಾಗಿದ್ದು, ನನ್ನ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ.

ನಾನು ನನ್ನ ಪ್ರಮಾಣ ಪತ್ರದೊಂದಿಗೆ ಕೆಲವು ದಾಖಲಾತಿಗಳನ್ನು ಹಾಜರಪಡಿಸಿದ್ದು ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದ್ರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಯನ್ನಾಗಿ ಗುರುತಿಸಲಾಗಿದೆ.

ಕುಮಟಾ ತಾಲೂಕಿನ ಗೋಕರ್ಣ ಗ್ರಾಮದ ಸ.ನಂ. 924 ರ ಪಹಣಿ ಪತ್ರಿಕೆಯನ್ನು ನಿ.ಪಿ. 1 ಎಂದು, ಕುಮಟಾ ತಾಲೂಕಿನ ಗೋಕರ್ಣ ಗ್ರಾಮದ ಸ.ನಂ. 1010 ಹಿಸ್ಸಾ 1 ರ ಪಹಣಿ ಪತ್ರಿಕೆಯನ್ನು ನಿ.ಪಿ. 2 ಎಂದು, ಕುಮಟಾ ತಾಲೂಕಿನ ಗೋಕರ್ಣ ಗ್ರಾಮದ ಸ.ನಂ. 1013 ಹಿಸ್ಸಾ 2 ರ ಪಹಣಿ ಪತ್ರಿಕೆಯನ್ನು ನಿ.ಪಿ. 3 ಎಂದು, ಕುಮಟಾ ತಾಲೂಕಿನ ಗೋಕರ್ಣ ಗ್ರಾಮದ ಸ.ನಂ. 1010 ಹಿಸ್ಸಾ 1 ರ 2020-21 ನೇ ಸಾಲಿನ ಪಹಣಿ ಪತ್ರಿಕೆಯ ಪ್ರತಿಯನ್ನು ನಿ.ಪಿ. 4 ಎಂದು, ಎಂ ಆರ್ ನಂ. ಹೆಚ್ 20 /2018-19 ನೇ ಸಾಲಿನ ಗಣಕೀಕೃತ ಪ್ರತಿಯನ್ನು ನಿ.ಪಿ. 5 ಎಂದು, ಎಂ ಆರ್ ನಂ. 329 /2006-07 ನೇ ಸಾಲಿನ ಗಣಕೀಕೃತ ಪ್ರತಿಯನ್ನು ನಿ.ಪಿ. 6 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ